# ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಶಿಕಾರಿಪುರ

## ಶಿಕ್ಷಣ ಶಾಸ್ತ್ರದ ಶಾಲಾ ವಿಷಯ : ಕನ್ನಡ

## ಶೀರ್ಷಿಕೆ : ಪರಿಕಲ್ಪನಾ ಸಾಧನಾ ಮಾದರಿ


**ಡಾ. ರವಿ ಹೆಚ್**

**ಸಹಾಯಕ ಪ್ರಾಧ್ಯಾಪಕರು**

# ಪರಿಕಲ್ಪನಾ ಸಾಧನಾ ಮಾದರಿ

ಪರಿಕಲ್ಪನೆ ಎಂದರೆ ಒಂದು ವಸ್ತುವಿನ ಬಗೆಗಿನ ತಿಳಿವಳಿಕೆ. ಯಾವುದೇ ವಸ್ತುವಿನ ಅಥವಾ ವಿಷಯದ ಗುಣಲಕ್ಷಣಗಳನ್ನು ಗುರುತಿಸಲು ಸಹಾಯಕವಾಗಿರುವ ಭಾವನೆಯನ್ನು ಪರಿಕಲ್ಪನೆ ಎಂದು ಕರೆಯುತ್ತಾರೆ. ಪರಿಕಲ್ಪನೆ ಸರ್ವ ರೀತಿಯ ಕಲಿಕೆಯ ಮೂಲವಾಗಿದೆ. ಮತ್ತು ಇದು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸ ಹೊಂದಿರುತ್ತದೆ. ಬೋಧನಾ ವಿಷಯಗಳ ವ್ಯಾಖ್ಯೆ, ಸಾಮಾನ್ಯೀಕರಣ ಮತ್ತು ಸಂಬಂಧಿಗಳ ಬಗ್ಗೆ ಕಲಿಕೆಯ ಗೊತ್ತಿಲ್ಲದ ಅಥವಾ ಹೊಸದಾದಂತಹ ವಿಶಿಷ್ಟ ಕ್ರಮವೇ ಪರಿಕಲ್ಪನೆ. ಪರಿಕಲ್ಪನೆ ಪ್ರತಿಯೊಂದು ವಿಷಯದ ಮೂಲಭೂತ ಅಂಶ. ಪರಿಕಲ್ಪನೆ ಇಲ್ಲದೆ ಸಿದ್ಧಾಂತ, ತತ್ವ ಮತ್ತು ನೀತಿ ನಿಯಮಗಳಿಲ್ಲ. ವಿಷಯವನ್ನು ಪರಿಣಾಮಕಾರಿ ಬೋಧಿಸುವುದು ಎಂದರೆ ಮೂಲ ಪರಿಕಲ್ಪನೆ ತಿಳಿಸಿಕೊಡುವುದು ಅಥವಾ ತಿಳಿಸುವಲ್ಲಿ ಸಹಾಯ ಮಾಡುವುದು.

**ಮಾರ್ಗನ್ :** "ಪರಿಕಲ್ಪನಾ ಸಾಧನಾ ಮಾದರಿಯು ಒಂದು ಪ್ರಕ್ರಿಯೆಯಾಗಿದ್ದು, ಇದು ವಸ್ತು, ವಿಷಯ ಮತ್ತು ಸಂಗತಿಗಳ ಸಾಮಾನ್ಯ ಲಕ್ಷಣಗಳನ್ನು ಪ್ರತಿನಿಧಿಸುತ್ತದೆ".

**ಮನ್ :** "ಪರಿಕಲ್ಪನಾ ಸಾಧನಾ ಮಾದರಿಯು ಒಂದು ಪ್ರಕ್ರಿಯೆಯಾಗಿದ್ದು, ಇದು ವಸ್ತು ವಿಷಯ ಮತ್ತು ಘಟನೆಗಳ ವೈಸಾಮಾನ್ಯತೆಯನ್ನು ತಿಳಿಸುತ್ತದೆ".

# ಪರಿಕಲ್ಪನಾ ಸಾಧನಾ ಮಾದರಿ ವಿಧಗಳು :

1. ಸ್ವಾಗತಕಾರಿ ಮಾದರಿ ಪರಿಕಲ್ಪನೆ ಹೊಂದುವಿಕೆ.
2. ಆಯ್ಕೆ ಮಾದರಿ ಪರಿಕಲ್ಪನೆ ಹೊಂದುವಿಕೆ.

# ಅಡಕವಾಗಿರುವ ಮೂಲಭೂತ ಅಂಶಗಳು :

**1. ವಾಕ್ಯ ರಚನೆ :** ಅಂಕಿ ಅಂಶಗಳು/ ಮಾಹಿತಿ ಪ್ರದರ್ಶನ, ಧನಾತ್ಮಕ ಮತ್ತು ಋಣಾತ್ಮಕ ಗುಣಲಕ್ಷಣಗಳ ಹೋಲಿಕೆ, ಅಗತ್ಯ ಗುಣಲಕ್ಷಣಗಳನ್ನು ಆಧರಿಸಿ ಪರಿಕಲ್ಪನೆಗಳನ್ನು ಗುರುತಿಸುವುದು. ಪರಿಕಲ್ಪನೆಯನ್ನು ಪರೀಕ್ಷಿಸುವುದು. ಪರಿಕಲ್ಪನೆಯನ್ನು ಅಗತ್ಯ ಗುಣಲಕ್ಷಣಗಳನ್ನು ಆಧರಿಸಿ ಪುನರೂಪಿಸುವುದು. ಆಲೋಚನಾ ತಂತ್ರಗಳ ವಿಶ್ಲೇಷಣೆ. ಪರಿಕಲ್ಪನೆಗಳನ್ನು ಕುರಿತು ವರ್ಣಿಸುವುದು ಅಥವಾ ಚರ್ಚಿಸುವುದು.

**2. ಸಾಮಾಜಿಕ ಕ್ರಮ :** ವಿದ್ಯಾರ್ಥಿಗಳನ್ನು ಶಿಕ್ಷಕರು ನಿಯಂತ್ರಿಸುವುದು, ಮುಕ್ತ ವಾತಾವರಣ ಉಂಟುಮಾಡುವುದು ಮತ್ತು ಭಾಗವಹಿಸುವಂತೆ ಪ್ರೋತ್ಸಾಹಿಸುವುದು.

**3. ಪ್ರತಿಕ್ರಿಯಾತ್ಮಕತೆ :** ಚರ್ಚೆಯಲ್ಲಿ ಒತ್ತಾಯ ಪೂರ್ವಕ ಪ್ರೋತ್ಸಾಹಿಸುವುದು, ಪರ–ವಿರೋಧ, ಗುಣಲಕ್ಷಣಗಳ ಕಡೆಗೆ ಗಮನ ಹರಿಸುವುದು, ಮೌಲ್ಯಮಾಪನ ಮತ್ತು ಅವುಗಳನ್ನು ಚರ್ಚಿಸಲು ಸಹಾಯ ಮಾಡುವುದು.

**4. ಪೂರಕ ಕ್ರಮ :** ಪರಿಕಲ್ಪನೆಗಳ ಕುರಿತು ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ವಿಶೇಷ ಜ್ಞಾನವನ್ನು ಹೊಂದುವುದು.

# ಧನ್ಯವಾದಗಳು